# ಗಾದೆ ಮಾತುಗಳ ವಿಸ್ತರಣೆ

## 1.ಶಕ್ತಿಗಿಂತ ಯುಕ್ತಿ ಮೇಲು.

ಗಾದೆಗಳು ವೇದಗಳಿಗೆ ಸಮಾನ , ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು. ಗಾದೆಗಳನ್ನು ಐದನೆಯ ವೇದಗಳೆಂದು ಕರೆಯಲಾಗಿದೆ. ಅಂತಹ ಗಾದೆಗಳಲ್ಲಿ ಮೇಲಿನ ಗಾದೆ ಮಾತೂ ಕೂಡಾ ಒಂದಾಗಿದೆ.

ಶಕ್ತಿಯು ವ್ಯಕ್ತಿಯ ಅಥವಾ ಜೀವಿಯ ದೈಹಿಕ ಸಾಮರ್ಥ್ಯಕ್ಕೆ ಸಂಬಂಧ ಪಟ್ಟಿದ್ದಾದರೆ, ಯುಕ್ತಿಯು ವ್ಯಕ್ತಿ ಅಥವಾ ಜೀವಿಯ ಮಾನಸಿಕ ಸಾಮರ್ಥ್ಯಕ್ಕೆ ಸಂಬಂಧ ಪಟ್ಟಿದ್ದಾಗಿದೆ. ಕೇವಲ ಶಕ್ತಿ ಇದ್ದರೆ ಸಾಲದು ,ಬುದ್ಧಿಯೂ ಅಷ್ಟೇ ಅವಶ್ಯವಾದುದದು. ಶಕ್ತಿಯಿಂದ ಗೆಲ್ಲಲಾಗದ ಎಷ್ಟೋ ಸಮಸ್ಯೆಗಳನ್ನು ಬುದ್ಧಿಶಕ್ತಿಯನ್ನು ಉಪಯೋಗಿಸಿ ಗೆದ್ದ ಉದಾಹರಣೆಗಳಿವೆ.

ದುರ್ಗಸಿಂಹನ ಪಂಚತಂತ್ರ ಕಥೆಯಲ್ಲಿ ಬರುವ ಒಂದು ಕಥೆಯಂತೆ ಚಿಕ್ಕ ಮೊಲವು ಸಿಂಹಕ್ಕೆ ಆಹಾರವಾಗಿ ಹೋಗಬೇಕಾಗಿ ಸಂದರ್ಭ ಬಂದೊದಗಿದಾಗ ಅದು ಆ ಸಿಂಹವನ್ನು ತನ್ನ ಮಾತಿನ ಶಕ್ತಿಯಿಂದ ನಂಬುವಂತೆ ಮಾಡಿ ಆ ಸಿಂಹದ ತರಹವೇ ಇನ್ನೊಂದು ಸಿಂಹವಿದೆಯೆಂದು ,ಅದು ಈ ಸಿಂಹಕ್ಕಿಂತ ಇನ್ನೂ ಬಲಿಷ್ಠವಿದೆಯೆಂದೂ , ಈ ಸಿಂಹದ ಬಗ್ಗೆ ಅವಮಾನಕರ ಮಾತುಗಳನ್ನಾಡಿತೆಂದೂ ಹೇಳಿ ಸಿಂಹವನ್ನು ಕೆರಳಿಸಿದಾಗ ,ಕೆರಳಿದ ಸಿಂಹವು ಆ ಮತ್ತೊಂದು ಸಿಂಹವೆಲ್ಲಿ ಎಂದಿತು.ಉಪಾಯದಿಂದ ಮೊಲನು ಶುಭ್ರ ನೀರಿರುವ ಬಾವಿಯ ಬಳಿ ಕರೆತಂದು ಸಿಂಹಕ್ಕೆ ಆ ಬಾವಿಯನ್ನು ತೋರಿಸಿ ಮತ್ತೊಂದು ಸಿಂಹ ಅಲ್ಲಿದೆ ಎಂದಾಗ ಯೋಚಿಸದೆ ಇಣುಕಿ ಅಲ್ಲಿ ಇರುವುದು ತನ್ನ ಪ್ರತಿಬಿಂಬ ಎಂದು ಅರಿಯದೆ ಮತ್ತೊಂದು ಸಿಂಹವನ್ನು ಹಿಡಿಯಲು ಬಾವಿಯಲ್ಲಿ ಹಾರಿ ಪ್ರಾಣ ಕಳೆದುಕೊಂಡಿತು. ಹೀಗೆ ಪುಟ್ಟ ಮೊಲವು ತನ್ನ ಯುಕ್ತಿಯನ್ನು ಬಳಸಿ ಪ್ರಾಣ ಉಳಿಸಿಕೊಂಡಿತು.

ಆದ್ದರಿಂದ ಸಮಸ್ಯೆಗಳು,ಸಂಕಷ್ಟಗಳು ಎದುರಾದಾಗ ನಮ್ಮ ಬುದ್ಧಿಶಕ್ತಿಗೆ ಚಾಲನೆ ಕೊಡಬೇಕು . ಅಪಾಯದ ಸನ್ನಿವೇಶವನ್ನು ಯುಕ್ತಿಯಿಂದ ಗೆಲ್ಲಬೇಕು ಎಂದು ಮೇಲಿನ ಗಾದೆ ತಿಳಿಸುತ್ತದೆ.

## 2. ಬೆಳ್ಳಗಿರುವುದೆಲ್ಲ ಹಾಲಲ್ಲ.

ಗಾದೆಗಳು ವೇದಗಳಿಗೆ ಸಮಾನ , ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು. ಗಾದೆಗಳನ್ನು ಐದನೆಯ ವೇದಗಳೆಂದು ಕರೆಯಲಾಗಿದೆ. ಅಂತಹ ಗಾದೆಗಳಲ್ಲಿ ಮೇಲಿನ ಗಾದೆ ಮಾತೂ ಕೂಡಾ ಒಂದಾಗಿದೆ.

ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎಂಬ ಮಾತಿದೆ. ಕೇವಲ ಹೊರಗಿನ ಬಣ್ಣ ಅಥವಾ ಬಾಹ್ಯರೂಪವನ್ನು ನೋಡಿ ಒಂದು ವಸ್ತು ಅಥವ ವ್ಯಕ್ತಿಯ ಬಗ್ಗೆ ನಿರ್ಧಾರ ಮಾಡಬಾರದು. ಹಾಲು ಮತ್ತು ಸುಣ್ಣ ನೋಡಲು ಎರಡೂ ಬಿಳಯಾಗಿರುತ್ತದೆ. ಸುಣ್ಣ ಬಿಳಿಯಾಗಿರುವುದೆಂದ ಮಾತ್ರಕ್ಕೆ ಹಾಲಿನ ಗುಣ ಅದಕ್ಕೆ ಬರಲು ಸಾಧ್ಯವಿಲ್ಲ . ಸುಣ್ಣವನ್ನು ಹಾಲೆಂದು ಭಾವಿಸಿ ಕುಡಿದರೆ ಮುಂದೆ ಆಗುವ ಅನಾಹುತಕ್ಕೆ ನಾವೇ ಆಹ್ವಾನ ಕೊಟ್ಟಂತೆ. ಆದ್ದರಿಂದ ಎದುರಿಗೆ ಇರುವ ವಸ್ತು ಅಥವಾ ವ್ಯಕ್ತಿಯ ಗುಣ ನಡತೆಯಿಂದ ,ಅವರೊಂದಿಗಿನ ಒಡನಾಟದಿಂದ ಅವರು ಎಂತವರು ಎಂಬ ತೀರ್ಮಾನಕ್ಕೆ ಬರಬೇಕು. ಹೊಳೆಯುವುದೆಲ್ಲ ಚಿನ್ನವಲ್ಲ ಎಂಬ ಮಾತು ಸದಾ ನಮ್ಮ ನೆನಪಿನಲ್ಲಿರಬೇಕು ಎಂಬುದನ್ನು ಮೇಲಿನ ಗಾದೆ ಮಾತು ತಿಳಿಸುತ್ತದೆ.

## 3. ಅತಿ ಆಸೆ ಗತಿಕೇಡು

ಗಾದೆಗಳು ವೇದಗಳಿಗೆ ಸಮಾನ , ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು. ಗಾದೆಗಳನ್ನು ಐದನೆಯ ವೇದಗಳೆಂದು ಕರೆಯಲಾಗಿದೆ. ಅಂತಹ ಗಾದೆಗಳಲ್ಲಿ ಮೇಲಿನ ಗಾದೆ ಮಾತೂ ಕೂಡಾ ಒಂದಾಗಿದೆ.

mamatabhagwat1@gmail.com

ಆಸೆಯೇ ದುಃಖಕ್ಕೆ ಮೂಲ ಎಂದು ಬುದ್ಧ ಹೇಳಿದ್ದಾನೆ. ಅತಿಯಾದ ಆಸೆ ಎಂದೂ ಒಳಿತನ್ನು ಮಾಡಲಾರದು. ದಿನವೂ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಹೊಂದಿದ್ದ ಅದರ ಮಾಲಿಕ ಒಮ್ಮೆಲೇ ಬಹಳಷ್ಟು ಚಿನ್ನ ಸಿಗಬಹುದೆಂಬ ಆಸೆಯಿಂದ ಅದನ್ನು ಕತ್ತರಿಸಿದಾಗ ಅದರ ಹೊಟ್ಟೆಯಲ್ಲಿ ಇದ್ದಿದ್ದು ಒಂದು ಚಿನ್ನದ ಮೊಟ್ಟೆ ಮಾತ್ರವೇ .ಅತಿಯಾಸೆಗೆ ಬಿದ್ದುದರಿಂದ ದಿವೂ ಸಿಗುತ್ತಿದ್ದ ಒಂದು ಚಿನ್ನದ ಮೊಟ್ಟೆಯನ್ನೂ ಅವನು ಕಳೆದುಕೊಳ್ಳುವಂತಾಯಿತು.

ಆದ್ದರಿಂದ ಅತಿಯಾಸೆಗೆ ಬಲಿ ಬೀಳಬಾರದು.ಪರಿಶ್ರಮದಿಂದ ಹಂತಹಂತವಾಗಿ ಸಂಪಾದಿಸಬೇಕು ಎನ್ನುವುದನ್ನು ಮೇಲಿನ ಗಾದೆ ಮಾತು ತಿಳಿಸುವುದು.

## 4. ಹಾಸಿಗೆ ಇದ್ದಷ್ಟು ಕಾಲು ಚಾಚು

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನು ಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಮೇಲಿನ ಗಾದೆ ಮಾತು ಜೀವನದ ಇತಿಮಿತಿಯನ್ನು ಸೂಚಿಸುತ್ತದೆ.

ಹಾಸಿಗೆಯ ಅಳತೆಗೆ ತಕ್ಕಂತೆ ಕಾಲು ಚಾಚಿ ಮಲಗಬೇಕು .ಇಲ್ಲವಾದರೆ ಕಾಲು ಹಾಸಿಗೆಯಿಂದ ಆಚೆ ಬಂದು ನೆಲ ಮುಟ್ಟಿ ಶೀತ ಬಾಧೆ ಬಂದೀತು . ಹಾಗಾಗಿ ಹಾಸಿಗೆ ಅಷ್ಟು ಉದ್ದವಿಲ್ಲದಿದ್ದರೆ ,ಮೊಟಕಾಗಿದ್ದರೆ ಕಾಲನ್ನು ಮಡಚಿಕೊಳ್ಳುತ್ತೇವೆ. ಹಾಗೆಯೇ ನಮ್ಮ ಮಿತಿಯನ್ನು ಅರಿತು ಬಾಳಬೇಕು .ಯಾವುದೇ ಕೆಲಸಕ್ಕೆ ಕೈ ಹಾಕಿದರೂ ನಮ್ಮ ಶಕ್ತಿ,ಸಾಮರ್ಥ್ಯ ,ಸೌಕರ್ಯಗಳನ್ನು ಗಮನಿಸಬೇಕು. ಅದಕ್ಕೆ ತಕ್ಕಂತೆ ಖರ್ಚು ಮಾಡಬೇಕು. ಸಾಲ ಮಾಡಿ ತುಪ್ಪ ತಿನ್ನುವ ಜಾಯಮಾನ ನಮ್ಮದಾಗಬಾರದು. ನಮ್ಮ ಆದಾಯಕ್ಕೆ ತಕ್ಕ ಹಾಗೆ ಖರ್ಚು ಮಾಡಬೇಕು. ಆದಾಯ ಕಡಿಮೆ ಖರ್ಚು ಅತಿಯಾದರೆ ಜೀವನದಲ್ಲಿ ನಾವೇ ಸಂಕಟಪಡಬೇಕಾಗುತ್ತದೆ. ದುಃಖ ,ಗೊಂದಲ ನಮ್ಮನ್ನು ಅವಲಂಬಿಸಿರುವವರಿಗೂ ಸಮಸ್ಯೆಗಳುಂಟಾಗುತ್ತವೆ.

ಬುದ್ಧ ಹೇಳುವಂತೆ ಆಸೆಯೇ ದುಃಖಕ್ಕೆ ಮೂಲ; ಆಸೆಯ ನಾಶವೇ ಸಂತೋಷದ ಮೂಲವಾಗಿದೆ. ಆದ್ದರಿಂದ ಇರುವುದರಲ್ಲಿ ತೃಪ್ತಿಕರವಾದ ,ಆರೋಗ್ಯಕರವಾದ ಜೀವನವನ್ನು ನಡೆಸಬೇಕು.ಮಿತಿಯನ್ನು ಅರಿತು ಬಾಳು ಎಂಬುದು ಮೇಲಿನ ಗಾದೆ ಮಾತಿನ ಸಂದೇಶವಾಗಿದೆ.

## 5.ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನು ಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ

ಈ ಗಾದೆಯ ಮಾತಿನ ಅರ್ಥವೆಂದರೆ ಕಷ್ಟ ಪಟ್ಟರೆ ಸುಖ ಎಂಬುದನ್ನು ಸೂಚಿಸುತ್ತದೆ. ಕನಕದಾಸರು "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ " ಪ್ರತಿಯೊಬ್ಬರೂ ಜೀವನೋಪಾಯಕ್ಕಾಗಿ ಒಂದೊಂದು ಕೆಲಸವನ್ನು ಅವಲಂಬಿಸಬೇಕಾಗುತ್ತದೆ. ಉಳುವ ಕೆಲಸವನ್ನು ರೈತರು, ನೆಯ್ಯುವ ಕಾರ್ಯವನ್ನು ನೇಕಾರರು ಹೀಗೆ ಪ್ರತಿಯೊಬ್ಬರು ತಮ್ಮ ತಮ್ಮ ಜೀವನ ನಿರ್ವಹಣೆಗೆ ಒಂದೊಂದು ಕೆಲಸವನ್ನು ಮಾಡುವಾಗ ಆ ಕೆಲಸದಲ್ಲಿ ಪ್ರತಿಫಲ ಇರುವ ಹಾಗೆಯೇ ಸಾಕಷ್ಟು ಕಷ್ಟ ನಷ್ಟಗಳೂ ಇರುತ್ತವೆ. ಆದರೆ ಕಷ್ಟಗಳು ಬರುವವೆಂದು ಕೆಲಸ ಮಾಡದೇ ಬದುಕಲಾಗದು. ಕೈ ಕೆಸರಾಗುವುದೆಂದು ರೈತ ಬೆಳೆಯನ್ನು ಬೆಳೆಯದಿರಲಾದೀತೇ ? ಬೆಳೆ ಇಲ್ಲದೇ ಊಟ ಮಾಡುವುದು ಹೇಗೆ ? ರೈತ ಕೈ ಕೆಸರನ್ನು ಗಮನಿಸದೇ ಮುಂದೆ ಸಿಗುವ ಪ್ರತಿಫಲದ ನಿರೀಕ್ಷೆಯು ಅವನನ್ನು ಕಷ್ಟ ಪಡಲು ಪ್ರೇರೇಪಿಸುತ್ತದೆ.

ಬಸವಣ್ಣನವರು ಹೇಳುವಂತೆ ಕಾಯಕವೇ ಕೈಲಾಸವಾಗಿದೆ. ಪರಿಶ್ರಮದಿಂದ ಮಾತ್ರವೇ ವಿದ್ಯೆ ಎಂದು ಸಂತ ಕಬೀರದಾಸರು ಹೇಳಿದ್ದಾರೆ.

ದುಡಿತವೇ ದುಡ್ಡಿನ ತಾಯಿ ಆದ್ದರಿಂದ ಪ್ರತಿಯೊಬ್ಬರೂ ಕಷ್ಟಪಟ್ಟು ದುಡಿಯಬೇಕು .ಉದ್ಯೋಗಿಯಾದರೆ ಮಾತ್ರ ಸಂಪತ್ತು ದೊರೆಯಲು ಸಾಧ್ಯ . ಆದ್ದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಕಾರ್ಯವನ್ನು ನಿಷ್ಠೆಯಿಂದ ಮಾಡಿದರೆ ಫಲ ದೊರೆಯಲು ಸಾಧ್ಯ .
(ದುಡಿಮೆಯೇ ದುಡ್ಡಿನ ತಾಯಿ /ಕಾಯಕವೇ ಕೈಲಾಸ /ಕಷ್ಟ ಪಟ್ಟರೆ ಫಲವಿದೆ ಈ ಗಾದೆ ಮಾತುಗಳಿಗೆ ಮೇಲಿನ ವಿವರಣೆಯನ್ನು ಅಳವಡಿಸಿಕೊಂಡು ಬರೆಯಿರಿ. )

## 6. ತುಂಬಿದ ಕೊಡ ತುಳುಕುವುದಿಲ್ಲ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನು ಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.
ಕೊಡ ತುಂಬಿದ್ದರೆ ಸಾಧಾರಣಕ್ಕೆ ತುಳುಕುವ ಕಾರಣವಿಲ್ಲ . ಅರ್ಧಮರ್ಧ ಇರುವಾಗ ನಾವು ಸಹಜವಾಗಿ ಎತ್ತಿದರೆ ನೀರು ಮೇಲೆ ಚಿಮ್ಮಿ ನಮ್ಮ ಮುಖ ಕ್ಕೆ ಸಿಂಪಡಿಸಿದಂತಾಗುವುದು. ಈ ಗಾದೆಯನ್ನು ಜ್ಞಾನಿಗೂ ಅರೆಬರೆ ತಿಳಿದವನಿಗೂ ಇರುವ ವ್ಯತ್ಯಾಸ ತಿಳಿಸಲು ಬಳಸುತ್ತಾರೆ.
ನಿಜವಾದ ಜ್ಞಾನಿಯಾದವನು ತನ್ನ ಜ್ಞಾನ ,ಹೆಸರು ,ಗೌರವವನ್ನು ತಾನೇ ಪ್ರಚಾರ ಮಾಡಿಕೊಳ್ಳಲು ಹೋಗುವುದಿಲ್ಲ . ಆದರೆ ಅರೆಬರೆ ಕಲಿತ ವ್ಯಕ್ತಿಗಳು ತಮ್ಮನ್ನು ಮಾಹಾ ಜ್ಞಾನಿಗಳು .ತಾನೇ ಸರ್ವ ಶ್ರೇಷ್ಠ ಎಂಬಂತೆ ಸಮಾಜದಲ್ಲಿ ವರ್ತಿಸುತ್ತಾರೆ. ರಾಮಕೃಷ್ಣ ಪರಹಂಸರಂತವರು ಆಲ್ಬರ್ಟ್ ಐನ್ ಸ್ಟೈನ್ ನಂತಹ ಮಹಾನ್ ವ್ಯಕ್ತಿಗಳಿಗೆ ತಮ್ಮನ್ನು ಪ್ರಚಾರಕ್ಕೆ ಒಳಪಡಿಸಿಕೊಳ್ಳಬೇಕಾದ ಆವಶ್ಯಕತೆಯೇ ಇರುವುದಿಲ್ಲ.ಸಂದರ್ಭ ಬಂದಾಗಲೆಲ್ಲ ಮಹಾತ್ಮರ ವ್ಯಕ್ತಿತ್ವ ತಾನೇ ತಾನಾಗಿ ವ್ಯಕ್ತವಾಗುತ್ತದೆ. ಅಲ್ಪವಿದ್ಯಾ ಮಹಾಗರ್ವಿಗಳು ಅರ್ಧ ತುಂಬಿದ ಕೊಡದ ಹಾಗೆ ಕೊಡವನ್ನೆತ್ತಿದ್ದರೆ ನೀರು ತುಳುಕುವಂತೆ ಆವಶ್ಯಕತೆ ಇಲ್ಲದಿದ್ದರೂ ತಮ್ಮನ್ನು ಪ್ರಚಾರಕ್ಕೆ ಒಳಪಡಿಸಿಕೊಳ್ಳುತ್ತಾರೆ.
ಯಾವುದೇ ವಿಷಯದಲ್ಲಿ ಪೂರ್ಣ ಜ್ಞಾನ ಪಡೆಯಲು ಪ್ರಯತ್ನಿಸಬೇಕು .ಅರ್ಧ ಬೆಂದ ಇಟ್ಟಿಗೆಯಾಗಬಾರದು .ಸ್ವ ಪ್ರದರ್ಶನ ಮಾಡಿಕೊಳ್ಳುವುದು ,ಆತ್ಮ ಪ್ರಶಂಸೆ ಮಾಡಿಕೊಳ್ಳುವುದು ದೊಡ್ಡಸ್ತಿಕೆಯ ಲಕ್ಷಣವಲ್ಲ.
ಪೂರ್ಣ ವಿಚಾರವನ್ನು ಅರಿತವರು ಪ್ರಚಾರಪ್ರಿಯರಾಗಿರುವುದಿಲ್ಲ.ಸಂಯುಮ ವುಳ್ಳವರಾಗಿರುತ್ತಾರೆ. ಆದರ್ಶಪ್ರಾಯರಾಗಿರುತ್ತಾರೆ.ಅರ್ಧ ತಿಳಿದುಕೊಂಡವರ ಮಾತಿನಲ್ಲಿ,ನಡೆನುಡಿಗಳಲ್ಲಿ ಸಂಯುಮವಿರಲಾರದು. ಈ ಗಾದೆ ಮಾತಿನಲ್ಲಿ ಜ್ಞಾನಿಗಳನ್ನು, ತುಂಬಿದ ಕೊಡಕ್ಕೂ ಅರ್ಧ ತಿಳಿದು ಪ್ರಚಾರ ಪ್ರಿಯರಾಗಿರುವವರನ್ನು ಅರ್ಧ ತುಂಬಿದ ಕೊಡಕ್ಕೂ ಹೋಲಿಸಲಾಗಿದೆ.

## 7. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ?

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನು ಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.
ಗಿಡ ಚಿಕ್ಕದಾಗಿರುವಾಗ ಅದನ್ನು ಬಾಗಿಸಬಹುದು .ಅದೇ ಅದು ಬೆಳೆದು ಗಟ್ಟಿಯಾಗಿ ಮರವಾದ ಮೇಲೆ ಅದನ್ನು ಬಗ್ಗಿಸಲು ಸಾಧ್ಯವಾಗುವುದಿಲ್ಲ.ಮನೆಯ ಮುಂದೆ ಅಲಂಕಾರಿಕವಾಗಿ ಬೆಳೆಸಬೇಕಾದ ಗಿಡವನ್ನು ಅದು ಚಿಕ್ಕದಿರುವಾಗಲೇ ನಮಗೆ ಬೇಕಾದ ಆಕಾರಕ್ಕೆ ಬಗ್ಗಿಸಬೇಕು .ಅದು ದೊಡ್ಡದಾದ ಮೇಲೆ ನಮಗೆ ಬೇಕಾದ ಆಕಾರಕ್ಕೆ ತರಲು ಆಗುವುದಿಲ್ಲ.
ಹಾಗೆಯೇ ಸಮಾಜದಲ್ಲಿ ಸತ್ಪ್ರಜೆಗಳಾಗಿ ಬಾಳಬೇಕಾದ ಮಕ್ಕಳಿಗೆ ಚಿಕ್ಕವರಿರುವಾಗಲೇ ಜೀವನ ಮೌಲ್ಯಗಳನ್ನು ರೂಢಿಸುವ ಕಾರ್ಯವಾಗಬೇಕು. ಅವರಿಗೆ ಚಿಕ್ಕವರಿರುವಾಗಲೇ ಬುದ್ಧಿ ಹೇಳಬೇಕು ,ತಪ್ಪು ಮಾಡಿದರೆ ತಿದ್ದಿ ತಿಳುವಳಿಕೆ ನೀಡಬೇಕು. ಆದರೆ ಅವರು ಚಿಕ್ಕವರು ಎನ್ನುವ ಕಾರಣಕ್ಕೆ ಅವರ ತಪ್ಪುಗಳನ್ನು ತಿದ್ದದೇ ಹಾಗೆ ಬೆಳೆಯಲು ಬಿಟ್ಟರೆ ಮುಂದೆ ದೊಡ್ಡವರಾದಂತೆ ಅದೇ ತಪ್ಪುಗಳೇ ಅವರ ಪಾಲಿಗೆ ಒಪ್ಪುಗಳಾಗಿ ಮಾರ್ಪಟ್ಟು ಮುಂದೆ ತಿದ್ದ ಹೊರಟರೂ ಪ್ರಯೋಜನವಾಗುವುದಿಲ್ಲ. ಮನೆಯಲ್ಲಿ ಮಕ್ಕಳನ್ನು ಎಷ್ಟು

ಪ್ರೀತಿಸಿದರೂ ಮುದ್ದಿಸಿದರೂ ಸರಿ ತಪ್ಪುಗಳ ಪ್ರಶ್ನೆ ಬಂದಾಗ ಅವರಿಗೆ ಅವರ ತಪ್ಪುಗಳನ್ನು ಮನಗಾಣಿಸಿ ಅವರನ್ನು ತಿದ್ದುವುದು ದೊಡ್ಡವರ ಆದ್ಯ ಕರ್ತವ್ಯವಾಗಿದೆ.

ಮಗುವಿನ ತಪ್ಪುನಡುವಳಿಕೆಯನ್ನು , ಕೆಟ್ಟ ಸಹವಾಸಗಳನ್ನು ಬಾಲ್ಯದಿಂದಲೇ ತಿಳಿಸಿ ಸರಿಪಡಿಸಬೇಕು .ಇಲ್ಲವಾದರೆ ದೊಡ್ಡವರಾದ ಮೇಲೆ ಅವರು ಸಮಾಜದಲ್ಲಿ ಯಾವುದೇ ಪ್ರಯೋಜನಕ್ಕೆ ಬಾರದವರಾಗಿ ಬಾಳಬೇಕಾಗುತ್ತದೆ ಆಮೇಲೆ ಅವರನ್ನು ಸರಿ ಪಡಿಸಲು ಸಾಧ್ಯವಾಗದೇ ಪಶ್ಚಾತ್ತಾಪ ಪಡುವ ಕಷ್ಟ ದೊಡ್ಡವರದಾಗುತ್ತದೆ ಎನ್ನುವುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

## ೮.ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನು ಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಬೆಟ್ಟವನ್ನು ದೂರದಿಂದ ನೋಡಿದಾಗ ಅಲ್ಲಿರುವ ಕಲ್ಲು ಮುಳ್ಳುಗಳಾಗಲೀ ಏರು ತಗ್ಗುಗಳಾಗಲೀ ಓರೆ ಕೋರೆಗಳಾಗಲೀ ಯಾವುದೂ ನಮ್ಮ ಗಮನಕ್ಕೆ ಬರಲಾರದು .ದೂರದಿಂದ ಕಾಣುವ ಅದರ ಸೌಂದರ್ಯ ಮಾತ್ರ ನಮ್ಮ ಗಮನವನ್ನು ಸೆಳೆಯುತ್ತದೆ. ದೂರದಿಂದ ವರ್ಣರಂಜಿತವಾಗಿ ,ನುಣುಪಾಗಿ ,ಆಕರ್ಷಕವಾಗಿ ಕಾಣುವ ಬೆಟ್ಟವು ತನ್ನೊಳಗೆ ಕಲ್ಲು ಮುಳ್ಳುಗಳನ್ನು ,ಬಂಡಗಳನ್ನು ಹೊಂದಿರುತ್ತದೆ. ಬೆಟ್ಟದ ದೂರದ ಸೌಂದರ್ಯಕ್ಕೆ ಮರುಳಾಗಿ ಹತ್ತಿರ ಹೋಗಿ ನೋಡಿದಾಗ ಅಲ್ಲಿರುವ ಬೆಟ್ಟದ ನಿಜವಾದ ಚಿತ್ರಣವು ನಮ್ಮಲ್ಲಿ ನಿರಾಸೆಯನ್ನು , ಅಲ್ಲಿನ ಕಲ್ಲುಮುಳ್ಳುಗಳಲ್ಲಿ ನಡೆದಾಡುವಾ ಗ ಆಗುವ ಸಮಸ್ಯೆಯನ್ನು, ಏರು ತಗ್ಗುಗಳು ಎದುರಾದಾಗ ನಡೆದಾಡಬೇಕಾದ ಎಚ್ಚರಿಕೆಯನ್ನು ಸೂಚಿಸಿ ದೂರದಿಂದ ನೋಡಿ ತೀರ್ಮಾನಿಸಿದುದರ ಬಗ್ಗೆ ನಮಗೇ ನಾಚಿಕೆಯನ್ನು ಮೂಡಿಸಬಹುದು.

ಅಂತೆಯೇ ಜೀವನದಲ್ಲಿ ನಮಗೆ ಬೇರೆ ಬೇರೆ ಮನೋಭಾವದ ಜನರು ಪರಿಚಿತರಾಗಬಹುದು . ಅವರ ಬಾಹ್ಯವಾದ ಸೌಂದರ್ಯಕ್ಕೆ ಮರುಳಾಗಿ ಗೆಳೆತನ ಮಾಡಬಾರದು ಅಥವಾ ಹೊರನೋಟದಿಂದ ಮಾತ್ರವೇ ವ್ಯಕ್ತಿಯನ್ನು ಅಳೆಯಲಾಗದು . ಅವರೊಂದಿಗಿನ ಒಡನಾಟದಿಂದ ಹಲವು ದಿನಗಳ ಪರಿಚಯಾತ್ಮಕ ಅಧ್ಯಯನದಿಂದ ಮಾತ್ರ ಅವರು ಹೇಗೆ ಎಂದು ಹೇಳಲು ಸಾಧ್ಯ .ಬೆಟ್ಟದ ನಿಜವಾದ ಸೌಂದರ್ಯ ಅಥವಾ ನ್ಯೂನತೆ ಅದನ್ನು ಒಳ ಹೊಕ್ಕು ನೋಡಿದಾಗ ಮಾತ್ರವೇ ಗೊತ್ತಾಗುವಂತೆ ಯಾರನ್ನೇ ಆಗಲಿ ಒಮ್ಮೆ ನೋಡಿ ತೀರ್ಮಾನಕ್ಕೆ ಬರದೇ ಅಧ್ಯಯನದಿಂದ ಮಾತ್ರವೇ ಅವರ ಕುರಿತು ತೀರ್ಮಾನಿಸಬೇಕು .ಇದು ಕೇವಲ ವ್ಯಕ್ತಿಗಳ ಸ್ನೇಹ ವಿಚಾರಕ್ಕೆ ಅಷ್ಟೇ ಸೀಮಿತವಾಗಿರದೇ ನಾವು ಯೋಚಿಸದೇ ತೆಗೆದುಕೊಳ್ಳುವ ತೀರ್ಮಾನಕ್ಕೂ ಅನ್ವಯವಾಗುತ್ತದೆ.

## ೯.ಕುಂಬಾರನಿಗೆ ವರುಷ ,ದೊಣ್ಣೆಗೆ ನಿಮಿಷ (ಕಟ್ಟುವುದು ಕಠಿಣ ಕೆಡಿಸುವುದು ಸುಲಭ )

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಕಟ್ಟುವುದು ಕಠಿಣ ಕೆಡಿಸುವುದು ಸುಲಭ ಎಂಬ ಇನ್ನೊಂದು ಗಾದೆಯ ಮಾತನ್ನು ಈ ಗಾದೆಯ ಮಾತು ಪ್ರತಿನಿಧಿಸುತ್ತದೆ. ಕುಂಬಾರನು ಬಹಳ ಶ್ರಮ ವಹಿಸಿ ಒಂದು ಮಡಿಕೆಯನ್ನು ಮಾಡುವನು .ಈ ಗಡಿಗೆ ಮಾಡಲು ಅವನು ಎರೆಮಣ್ಣನ್ನು ತಂದು ಅದರಲ್ಲಿರುವ ಕಲ್ಲು ಮರಳುಗಳನ್ನು ಬೇರ್ಪಡಿಸಿ ಮತ್ತೆ ಅದಕ್ಕೆ ನೀರು ಬೆರೆಸಿ ಕಲಸಿ ತುಳಿದು ಹದ ಮಾಡಿ ಕೈ ಕಾಲುಗಳಿಗೆ ಕೆಸರು ಮೆತ್ತಿಸಿಕೊಂಡು ಹದಗೊಂಡ ಮಣ್ಣನ್ನು ತಿಗುರಿಯ ಮೇಲಿಟ್ಟು ತಿರುಗಿಸಿ ಮಡಿಕೆಯ ಆಕಾರಕ್ಕೆ ತರಬೇಕಾಗುತ್ತದೆ. ಮತ್ತೆ ನೀರಿನ ಪಸೆ ಆರಿದ ಮೇಲೆ ಬಿಸಿಲಲ್ಲಿಟ್ಟು ಒಣಗಿಸಬೇಕು .ಮತ್ತೆ ಜೋಡಿಸಿಡಬೇಕು . ಇಷ್ಟೆಲ್ಲ ಕಷ್ಟಪಟ್ಟು ತಯಾರಿಸಿದ

ಮಡಿಕೆಯನ್ನು ಒಡೆದು ಹಾಕಲು ಒಂದು ಕ್ಷಣ ಸಾಕು .ದೊಣ್ಣೆಯನ್ನು ಬಳಸಿ ಮಡಿಕೆಯನ್ನು ಒಂದೇ ಕ್ಷಣದಲ್ಲಿ ಹಾಳುಗೆಡವಬಹುದು ಎತ್ತರವಾಗಿ ಬೆಳೆದ ಮರವನ್ನು ಒಂದೆರಡು ಗಂಟೆಗಳಲ್ಲಿ ಕೊಡಲಿಯಿಂದ ಉರುಳಿಸಬಹುದು.

ಉತ್ತಮ ಗುಣಗಳು ದುರ್ಜನರ ಸಹವಾಸದಿಂದ ಮರೆಯಾಗಬಹುದು.

ಅದರಂತೆಯೇ ಯಾವುದೇ ಮಹತ್ಕಾರ್ಯದ ಈಡೇರಿಕೆಗೆ ನಿರಂತರ ಪರಿಶ್ರಮ ಅಗತ್ಯ .ಆದರೆ ಸ್ವಲ್ಪ ನಿರ್ಲಕ್ಷ ತೋರಿದರೂ ಮಾಡಿದ ಕಾರ್ಯವು ಹೊಳೆಯಲ್ಲಿ ಹೋಮ ಮಾಡಿದಷ್ಟೇ ನಿರರ್ಥಕವಾಗಿ ಬಿಡಬಹುದು.

ಯಾವುದನ್ನೇ ಆಗಲಿ ಹಾಳುಗೆಡವುವುದು ತುಂಬಾ ಸುಲಭ ,ರೂಪಿಸುವುದು ಕಷ್ಟ ; ಹಾಳು ಮಾಡಿದ್ದನ್ನು ಮತ್ತೆ ಸರಿಪಡಿಸುವುದೂ ಅಷ್ಟು ಸುಲಭವಲ್ಲ. ಆದ್ದರಿಂದ ಯೋಚಿಸಿ ಕಾರ್ಯ ಮಾಡಬೇಕು ಎಂಬುದು ಮೇಲಿನ ಗಾದೆಯ ಅರ್ಥವಾಗಿದೆ. .

## 10.ತಾಳಿದವನು ಬಾಳಿಯಾನು

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ತಾಳುವಿಕೆಗಿಂತ ತಪವಿಲ್ಲ ಎಂದು ದಾಸರು ಹೇಳಿದ್ದಾರೆ. ಕೋಪವೆಂಬುದು ಅನರ್ಥ ಸಾಧನ .ಮನುಷ್ಯನಿಗೆ ತಾಳ್ಮೆ ಅತಿ ಪ್ರಧಾನವಾದುದು.ಎಂತಹ ಸಂದರ್ಭದಲ್ಲಿಯೂ ತಾಳ್ಮೆ ,ವಿವೇಕವನ್ನು ಕಳೆದುಕೊಳ್ಳಬಾರದು. ಜೀವನದಲ್ಲಿ ಏಳು ಬೀಳುಗಳು ಸಹಜ .ಸುಖ ದುಃಖ ಗಳು ಜೀವನದಲ್ಲಿ ಬರುತ್ತಿರುವಂತೆಯೇ ಹೊರಟು ಹೋಗುತ್ತಿರುತ್ತವೆ. ಸುಖ ಬಂದಾಗ ಹಿಗ್ಗದೇ ದುಃಖ ಬಂದಾಗ ಕುಗ್ಗದೇ ಎರಡನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವನೆ ಬೇಕು . ತಾಳ್ಮೆಗೆಟ್ಟು ತೆಗೆದುಕೊಳ್ಳುವ ಆತುರದ ನಿರ್ಧಾರವು ಭವಿಷ್ಯಕ್ಕೇ ಮಾರಕವಾಗಬಲ್ಲುದು.

ದಾಸರು ಹೇಳುವಂತೆ "ಈಸಬೇಕು ,ಇದ್ದು ಜಯಿಸಬೇಕು"ಪ್ರವಾಹ ಎದುರಾದರೂ ಈಜಿ ಆಚೆಯ ದಡವನ್ನು ಸೇರುವ ಮನೋಭಾವ ಇರಬೇಕು. ಜೀವನದ ಕಷ್ಟಗಳನ್ನು ಎದುರಿಸಲಾಗದೇ ಆತ್ಮಹತ್ಯೆ ಮಾಡಿಕೊಳ್ಳುವಂತಹ ಹೇಡಿತನದ ನಿರ್ಧಾರಕ್ಕೆ ಬರಬಾರದು. ತಾಳ್ಮೆಯಿಂದ ಬಂದ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಿ ಬದುಕನ್ನು ಗಟ್ಟಿಗಳಿಸುತ್ತ ಮುಂದೆ ಸಾಗಬೇಕು .

## 11.ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು .

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಕೀರ್ತಿ ಪಡೆಯಲು ವ್ಯಕ್ತಿ ಆಕಾರದಲ್ಲಿ ಅಥವಾ ಗಾತ್ರದಲ್ಲಿ ದೊಡ್ಡವನಾಗಿರಬೇಕೆಂದಿಲ್ಲ. ದೇಹದ ಗಾತ್ರಕ್ಕಿಂತ ವ್ಯಕ್ತಿಯ ಪರಿಶ್ರಮ ,ಅವನ ಕಾರ್ಯದಲ್ಲಿನ ನಿಷ್ಠೆ ಅವನನ್ನು ಸಾಧನೆಯ ಹಾದಿಯಲ್ಲಿ ಮೇಲಕ್ಕೆ ಕರೆದೊಯ್ಯಬಲ್ಲುದು. ನಮ್ಮ ದೇಶದ ಪ್ರಧಾನ ಮತ್ರಿಗಳಾಗಿದ್ದ ಲಾಲಬಹದ್ದೂರ ಶಾಸ್ತ್ರಿಯವರು ನೋಡಲು ಆಕಾರದಲ್ಲಿ ಕುಳ್ಳಗಿದ್ದರೂ ಅವರ ಕೀರ್ತಿ ವಿಶ್ವಮಾನ್ಯವಾದುದು.ಅದೇ ರೀತಿ ಹೆಚ್ಚು ಎತ್ತರವಿಲ್ಲದ ಸಚಿನ್ ತೆಂಡೂಲ್ಕರ್ ಕ್ರಿಕೆಟ್ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅವರನ್ನು ಅವರ ಅಭಿಮಾನಿಗಳು ಕ್ರಿಕೆಟ್ ದೇವರು ಎಂದು ಗುರುತಿಸುವಂತೆ ಮಾಡಿದೆ. ಅವರ ಸಾಧನೆಯನ್ನು ಇಡೀ ಜಗತ್ತೇ ಕೊಂಡಾಡುತ್ತದೆ.

ಆದ್ದರಿಂದ ವ್ಯಕ್ತಿಯು ಕೀರ್ತಿ ಸಾಧಿಸಲು ಅವನು ನೋಡಲು ಅಥವಾ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಅದು ಅವನ ಸಾಧನೆಗೆ ಯಾವ ಅಡ್ಡಿಯನ್ನೂ ಉಂಟು ಮಾಡದು ಎಂಬುದನ್ನು ಮೇಲಿನ ಗಾದೆ ಮಾತು ತಿಳಿಸುತ್ತದೆ.

## 12. ಮಾಡಿದ್ದುಣ್ಣೋ ಮಾರಾಯ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಲೋಕದಲ್ಲಿ ಕೇಳುವ ಹಾಗೆ ನೀ ಬೆಳೆದ ಮರದ ಫಲ ನೀ ಸವಿಯಬೇಕು. ನೀ ಮಾಡಿದ ಕರ್ಮವನ್ನು ನೀನು ಅನುಭವಿಸಲೇ ಬೇಕು. ನೀ ನೆಟ್ಟ ಮುಳ್ಳುಗಿಡ ನಿನ್ನ ಕಾಲಡಿಗೆ ,ಕೂಡಿಟ್ಟ ಪಾಪಗಳು ನಿನ್ನ ಸಂತತಿಗೆ ಇಂತಹ ಮಾತುಗಳಿವೆ. ಇವು ವ್ಯಕ್ತಿ ತಾನು ಏನು ಕಾರ್ಯ ಮಾಡಿರುತ್ತಾನೋ ಅದರ ಫಲವನ್ನು ಪ್ರತ್ಯಕ್ಷವಾಗಿ ಆಗಲೀ ಅಥವಾ ಪರೋಕ್ಷವಾಗಿ ಆಗಲೀ ಅನುಭವಿಸಬೇಕಾಗುವುದು ಎಂಬುದನ್ನು ಸೂಚಿಸುತ್ತದೆ. ಒಳ್ಳೆಯದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಕೊನೆಯ ಪಕ್ಷ ಮನಸ್ಸಿನ ನೆಮ್ಮದಿಯಾದರೂ ಸಿಗುತ್ತದೆ. ಇತರರಿಗೆ ಕೇಡು ಬಯಸಿದರೆ ಅದು ನಮಗೇ ಕೆಡುಕಾಗಿ ಪರಿಣಮಿಸುತ್ತದೆ. ಉಪ್ಪು ತಿಂದ ಮೇಲೆ ನೀರು ಕುಡಿಯಬೇಕಾಗುವುದು ಸಹಜ .

## 13.ಆಳಾಗಬಲ್ಲವನು ಅರಸಾಗಬಲ್ಲ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಕಾಯಕದ ಮಹತ್ವವನ್ನು ಬಡವ ,ಶ್ರೀಮಂತ ಎಂಬ ಭೇದವಿಲ್ಲದೆ ತಿಳಿದುಕೊಳ್ಳಬೇಕಾಗಿರುವುದು ಮಹತ್ವ . ಕಾಯಕವೇ ಕೈಲಾಸ ಎಂದು ಬಸವಣ್ಣನವರು ಹೇಳಿದ್ದಾರೆ. ಕೈ ಕೆಸರಾದರೆ ಬಾಯಿ ಮೊಸರು . ಹಾಗೆಯೇ ಯಾರು ಕಾಯಕದಲ್ಲಿ ಕಾಯಾ, ವಾಚಾ ,ಮನಸಾ ತನ್ನನ್ನು ಅರ್ಪಿಸಿಕೊಳ್ಳುತ್ತಾನೋ ಅವನು ಮುಂದೆ ನೆಮ್ಮದಿಯ ಬದುಕು ನಡೆಸಬಹುದು. ಕಷ್ಟಪಟ್ಟರೆ ಫಲವುಂಟು ಎಂಬುದನ್ನು ಮರೆಯಬಾರದು. ದುಡಿಯುವ ಸಂದರ್ಭದಲ್ಲಿ ಸಮರ್ಪಣೆ ಬಹಳ ಪ್ರಧಾನವಾದುದು. ಆಳು ಮಾಡುವ ಕೆಲಸ ಯಜಮಾನನಿಗೆ ಸ್ವತಃ ಗೊತ್ತಿರಬೇಕು .ಇಲ್ಲವಾದರೆ ಅವನಿಂದ ಕೆಲಸ ಮಾಡಿಸಲೂ ಸಾಧ್ಯವಿಲ್ಲ. ಆಳಿನ ದುಡಿಮೆ ,ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರಿತುಕೊಳ್ಳಬೇಕು. ಆಗ ಮಾತ್ರ ಅರಸನಾಗಿ ಅವರ ಸಮಸ್ಯೆ ಪರಿಹರಿಸಬಹುದು.

(ಆಳಾಗಿ ದುಡಿ ,ಅರಸನಾಗಿ ಉಣ್ಣು )

## 14.ಚಿಂತೆಯೇ ಮುಪ್ಪು ಸಂತೋಷವೇ ಯೌವ್ವನ .

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಚಿತೆಗೂ ಚಿಂತೆಗೂ ಬಿಂದು ಮಾತ್ರವೇ ವ್ಯತ್ಯಾಸವು. ಚಿತೆಯು ಸತ್ತವರನ್ನು ಸುಟ್ಟರೆ ಚಿಂತೆಯು ಜೀವಂತ ಇರುವವರನ್ನೇ ಸುಡುತ್ತದೆ. ಸುಖ ಸಂತೋಷಗಳೆರಡೂ ಜೀವನದ ಅವಿಭಾಜ್ಯ ಅಂಗಗಳು. ಅವುಗಳನ್ನು ಬಂದ ಹಾಗೆಯೇ ಸ್ವೀಕರಿಸಬೇಕು. ಸಮಸ್ಯೆಗಳಿಲ್ಲದೇ ಬದುಕಿಲ್ಲ.ಕಷ್ಟ ಬಂದಾಗ ಅದಕ್ಕಾಗಿ ಚಿಂತಿಸದೇ ಅದನ್ನು ನಿವಾರಿಸುವ ಬಗೆಯನ್ನು ಕಂಡುಕೊಳ್ಳಬೇಕು. ಚಿಂತೆಯು ಮನುಷ್ಯನನ್ನು ಆವರಿಸಿಕೊಂಡರೆ ಅವನ ಚೈತನ್ಯ ಶಕ್ತಿಯೇ ಉಡುಗಿ ಬೇಗ ಮುಪ್ಪು ಆವರಿಸಿದಂತಾಗುತ್ತದೆ. ಅದರ ಬದಲು ಬಂದ ಸಮಸ್ಯೆಗಳನ್ನು ಸಮಾಧಾನದಿಂದ ನಿವಾರಿಸಿಕೊಳ್ಳುತ್ತ ಸಂತೋಷದಿಂದ ಬದುಕಿದರೆ ಇನ್ನಷ್ಟು ಉತ್ಸಾಹಶೀಲತೆಯನ್ನೂ ಯೌವ್ವನವನ್ನೂ ಪಡೆದುಕೊಂಡಂತಾಗುತ್ತದೆ.

ಜೀವನವು ಸುಖ ದುಃಖಗಳ ಸಮ್ಮಿಲನ ಎಂದು ಅರಿತು ಬಾಳಬೇಕು ಎಂಬುದನ್ನು ಮೇಲಿನ ಗಾದೆ ಮಾತು ವಿವರಿಸುತ್ತದೆ.

## 15.ದೇಶ ಸುತ್ತಿ ನೋಡು ,ಕೋಶ ಓದಿ ನೋಡು

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ದೇಶ ಸುತ್ತುವುದರಿಂದ ಲೋಕಜ್ಞಾನವು ದೊರೆಯುತ್ತದೆ. ಪುಸ್ತಕಗಳು ನಮ್ಮ ಜ್ಞಾನವನ್ನು ವೃದ್ಧಿಸಿದರೆ ದೇಶ ಸುತ್ತುವಿಕೆಯು ನಮ್ಮ ಜೀವನದ ಅನುಭವಗಳನ್ನು ಹೆಚ್ಚಿಸುತ್ತವೆ. ದೇಶವನ್ನು ಸುತ್ತುವುದರಿಂದ ಹಲವು ಪ್ರದೇಶಗಳ ಭೌಗೋಳಿಕ ಪರಿಕಲ್ಪನೆಯ ಜೊತೆ ಅಲ್ಲಿನ ಜನರ ಆಚಾರ ವಿಚಾರ ಜೀವನದ ರೀತಿನೀತಿಗಳ ಅರಿವು ನಮಗೆ ಉಂಟಾಗುತ್ತದೆ.
ಹಾಗಾಗಿ ದೇಶ ಸುತ್ತುವಿಕೆ ಮತ್ತು ಪುಸ್ತಕಗಳ ಓದು ಇವೆರಡೂ ಜೀವನಕ್ಕೆ ಅವಶ್ಯವಾದವು ಎಂಬುದನ್ನು ಮೇಲಿನ ಗಾದೆ ಸೂಚಿಸುತ್ತದೆ.

## *16.*ಹೆತ್ತತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲಾದುದು.

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.
ರಾವಣನ ವಧೆಯ ನಂತರ ಲಂಕೆಯಲ್ಲೇ ಇರಬಹುದಲ್ಲ ಎಂಬ ಲಕ್ಷ್ಮಣನ ಮಾತಿಗೆ ಶ್ರೀ ರಾಮನು ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಎಂದು ಉತ್ತರಿಸುತ್ತಾನೆ ಎಂದು ರಾಮಾಯಣದಲ್ಲಿ ಉಲ್ಲೇಖವಿದೆ. ಹೆತ್ತ ತಾಯಿ ಜನ್ಮ ನೀಡಿದವಳಾದರೆ ಜನ್ಮಭೂಮಿ ಆಶ್ರಯವಿತ್ತಿದೆ. ಹೆತ್ತ ತಾಯಿ ನೀಡುವ ಪ್ರೀತಿ ,ಮಮತೆ ಯನ್ನು ಇನ್ನು ಯಾರಿಂದಲೂ ನೀಡಲು ಸಾಧ್ಯವಿಲ್ಲ. ಅದೇ ರೀತಿ ಜನ್ಮಭೂಮಿಯಲ್ಲಿ ಸಿಗುವ ಸುಖ ನೆಮ್ಮದಿ ಇನ್ನು ಯಾವ ದೇಶಕ್ಕೆ ಹೋದರೂ ಸಿಗಲು ಸಾಧ್ಯವಿಲ್ಲ.
ಆದ್ದರಿಂದ ಜನ್ಮ ಭೂಮಿ ಮತ್ತು ಜನ್ಮ ದಾತೆ ಇವರ ಪಾತ್ರವು ನಮ್ಮ ಜೀವನದಲ್ಲಿ ವಿಶೇಷವಾದುದು ಎಂಬುದನ್ನು ಮೇಲಿನ ಗಾದೆ ಮಾತು ತಿಳಿಸುತ್ತದೆ.

## *17.*ಮಾತೇ ಮುತ್ತು ಮಾತೇ ಮೃತ್ಯು

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.
ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ.ಮಾತು ಮನೆ ಕೆಡಿಸಿತು ,ತೂತು ಒಲೆ ಕೆಡಿಸಿತು. ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಇವೆಲ್ಲ ನುಡಿಗಳೂ ಮಾತಿನ ಮಹತ್ವವನ್ನು ಸಾರುತ್ತವೆ. ಮಾತು ಹಿತಮಿತವಾಗಿರಬೇಕು.ಹಿಡಿತದಲ್ಲಿರಬೇಕು.ಯಾವ ಮಾತನ್ನು ಯಾರೊಂದಿಗೆ ಯಾವಾಗ ಆಡುತ್ತಿದ್ದೇವೆ ಎಂಬುದರ ಪರಿಕಲ್ಪನೆ ಇರಬೇಕು. ತೂಕವಿರುವ ಮಾತು ಮುತ್ತಿನಂತೆ ,ತೂಕ ತಪ್ಪಿದ ಮಾತು ಮೃತ್ಯುವಿಗೆ ಆಹ್ವಾನವಿತ್ತಂತೆ.ಮಾತು ಸ್ನೇಹವನ್ನೂ ಸೃಷ್ಟಿಸಬಲ್ಲದು.ಶತ್ರುಗಳನ್ನೂ ಕಟ್ಟಿಕೊಡಬಲ್ಲದು. ಆದ್ದರಿಂದ ಯೋಚಿಸಿ ಅಗತ್ಯವಿದ್ದಷ್ಟು ಮೌಲ್ಯಯುತ ಮಾತುಗಳನ್ನು ಆಡಬೇಕು.ಬಸವಣ್ಣನವರು ಹೇಳುವಂತೆ ನುಡಿದರೆ ಮುತ್ತಿನ ಹಾರದಂತೆ,ನುಡಿದರೆ ಮಾಣಿಕ್ಯದ ದೀಪ್ತಿಯಂತೆ ,ನುಡಿದರೆ ಸ್ಫಟಿಕದ ಶಲಾಕೆಯಂತೆ ,ನುಡಿದರೆ ಲಿಂಗ ಮೆಚ್ಚಿ ಅಹುದು ಅಹುದು ಎನುವಂತೆ ಅರಿತು ಮಾತನಾಡಬೇಕು.
(ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಗಾದೆ ಮಾತಿಗೂ ಮೇಲಿನ ವಿಚಾರಗಳನ್ನು ಅನ್ವಯಿಸಿಕೊಳ್ಳಿರಿ )

## *18.* ತಾಯಿಗಿಂತ ಬಂಧುವಿಲ್ಲ ;ಉಪ್ಪಿಗಿಂತ ರುಚಿಯಿಲ್ಲ.

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.
ಜೀವನದಲ್ಲಿ ನಮಗೆ ಸಾಕಷ್ಟು ಸ್ನೇಹಿತರೂ ,ಆತ್ಮೀಯರೂ ,ಬಂಧುಗಳೂ ಇರಬಹುದು.ಆದರೆ ಯಾರೂ ಕೂಡ ಹೆತ್ತ ತಾಯಿಯ ಸ್ಥಾನವನ್ನು ತುಂಬಲಾರರು. ಜನಪದರು ಹೇಳುವಂತೆ ಸಾವಿರ ಸೌದೆ ಒಲೆಯಲ್ಲಿ ಉರಿದರೂ ದೀವಿಗೆಯಂತ ಬೆಳಕಿಲ್ಲ.ಅದೇ ರೀತಿ ತಾಯಿಯೂ ಸಹ . ನಮಗಾಗಿ ತನ್ನ ಜೀವನದಲ್ಲಿ ಎದುರಾಗುವ ಸಂಕಷ್ಟಗಳನ್ನು ನುಂಗಿ ,ನೀಗಿಸಿಕೊಂಡು ನಮಗಾಗಿ ಮಿಡಿಯುವವಳು

ತಾಯಿ ಮಾತ್ರ. ಅಡುಗೆಯಲ್ಲಿ ಉಪ್ಪು ಎಷ್ಟು ಪ್ರಧಾನವೋ ಅದೇ ರೀತಿ ಜೀವನದಲ್ಲಿ ನಮ್ಮ ಏಳ್ಗೆಗೆ ಕಾರಣಳಾಗುವವಳು ತಾಯಿ. ಉಪ್ಪಿನ ಸಹಯೋಗವಿಲ್ಲದ ಊಟ ಸಪ್ಪೆ ಎನಿಸುವಂತೆ ತಾಯಿಯಿಲ್ಲದ ಬದುಕೂ ನೀರಸವೆನಿಸುತ್ತದೆ ಎಂಬುದನ್ನು ಮೇಲಿನ ಗಾದೆ ಪ್ರಸ್ತುತ ಪಡಿಸುತ್ತದೆ.

## 19. ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ (ಗುಣ ನೋಡಿ ಗೆಳೆತನ ಮಾಡು )

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಗುಣ ನೋಡಿ ಗೆಳೆತನ ಮಾಡಬೇಕು . ಸಗಣಿಯವನೊಡನೆ ಸರಸಕ್ಕಿಂತ ಗಂಧದವನೊಡನೆ ಗುದ್ದಾಟ ಲೇಸು ಎಂದಿದ್ದಾರೆ ಬಲ್ಲವರು . ನಾವು ಎಂತವರ ಸಹವಾಸ ಮಾಡುತ್ತೇವೆ ಎಂಬುದರ ಮೇಲೆ ನಮ್ಮ ವ್ಯಕ್ತಿತ್ವವನ್ನು ಇತರರು ಅಳೆಯುತ್ತಾರೆ ಎನ್ನುವುದನ್ನು ಮರೆಯಬಾರದು . ಸಜ್ಜನರ ಸಹವಾಸ ಹೆಜ್ಜೇನಿನ ಸವಿಯಷ್ಟೇ ಸಿಹಿಯಾದುದು. ಬದುಕನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಿಕೊಮಡು ಹೋಗಲು ಸಜ್ಜನರ ಒಡನಾಟ ಬಹಳ ಮುಖ್ಯ. ಅದಕ್ಕೆ ಸರ್ವಜ್ಞ ಕವಿಯು ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ ,ದುರ್ಜನರ ಸಂಗವದು ಬಚ್ಚಲು ಮನೆಯ ರೊಜ್ಜಿನಂತಿಹುದು ಎಂದಿದ್ದಾನೆ.

ಒಳ್ಳೆಯವರ ಸಹವಾಸ ಮಾಡಬೇಕು ಎಂಬುದನ್ನು ಮೇಲಿನ ಗಾದೆ ಮಾತು ತಿಳಿಸುತ್ತದೆ.

## 20. ಮನಸ್ಸಿದ್ದರೆ ಮಾರ್ಗವಿದೆ.

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಯಾವುದೇ ಒಂದು ಕಾರ್ಯವನ್ನು ಈಡೇರಿಸಿಕೊಳ್ಳಲು ಮನಸ್ಸು ಮುಖ್ಯ. ಆಸಕ್ತಿಯಿಂದ ಮನಸ್ಸುಗೊಟ್ಟು ಮಾಡಿದರೆ ಎಂತಹ ಕೆಲಸವನ್ನಾದರೂ ಮಾಡಿ ಮುಗಿಸಬಹುದು. ಜೀವನದಲ್ಲಿ ಎದುರಾದ ಸಮಸ್ಯೆಗಳಿಗೂ ಅಷ್ಟೇ ವಿವೇಕದಿಂದ ಯೋಚಿಸಿದಾಗ ಪರಿಹಾರ ಸಿಗುವುದು. ಮನಸ್ಸಿಲ್ಲದೇ ಮಾಡುವ ಯಾವ ಕಾರ್ಯವೂ ಯಶಸ್ವಿಯಾಗಲಾರದು. ಯಾವುದೇ ಸಾಧನೆಗೂ ಮನಸ್ಸಿಟ್ಟು ಮಾಡುವ ಪರಿಶ್ರಮವೇ ಪ್ರಧಾನವಾದುದು.

## 21. ಬೆಳೆಯುವ ಸಿರಿ ಮೊಳಕೆಯಲ್ಲಿ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಒಂದು ಸಸಿಯು ಬೆಳೆಯುವ ಹಂತದಲ್ಲಿದ್ದಾಗ ಅದನ್ನು ನೋಡಿಯೇ ಅದು ಮುಂದೆ ಎಂತಹ ಫಲವನ್ನು ಕೊಡಬಹುದು ಎಂದು ಅಂದಾಜಿಸಬಹುದು. ಅದೇ ರೀತಿ ಮಕ್ಕಳು ಬಾಲ್ಯದಲ್ಲಿದ್ದಾಗ ದಷ್ಟಪುಷ್ಟರಾಗಿದ್ದು ಆರೋಗ್ಯವಂತರಾಗಿದ್ದರೆ ಮುಂದೆ ನಿರೋಗಿಯಾದ ಬಲಿಷ್ಠ ವ್ಯಕ್ತಿಯಾಗಿ ಹೊರಹೊಮ್ಮುತ್ತಾರೆಮದು ಅಂದಾಜಿಸಬಹುದು. ಅದಕ್ಕಿಂತ ಮುಖ್ಯವಾಗಿ ಬಾಲ್ಯದಲ್ಲಿ ಒಳ್ಳೆಯ ಗುಣ ನಡುವಳಿಕೆಯನ್ನು ,ಸ್ವಭಾವವನ್ನು ಹೊಂದಿದ ಮಗುವು ಮುಂದೆ ಒಳ್ಳೆಯ ನಾಗರಿಕನಾಗಿ ಹೊರಹೊಮ್ಮಬಹುದು. ಕೆಟ್ಟ ಗುಣ ನಡುವಳಿಕೆಯಿಂದ ಕೂಡಿದ ಮಗುವು ಮುಂದೆ ದೊಡ್ಡವನಾಗಿ ಸಮಾಜ ಕಂಟಕನಾಗಬಹುದು ಎಂದು ಅಂದಾಜಿಸಬಹುದು. ಆದ್ದರಿಂದ ಬಾಲ್ಯದಿಂದಲೇ ಮಕ್ಕಳ ನಡುವಳಿಕೆಗಳನ್ನು ,ಆಸಕ್ತಿಯನ್ನು ಗುರುತಿಸಿ ಒಳ್ಳೆಯ ಬದುಕು ಹೊಂದಲು ಪ್ರೇರೇಪಿಸಬೇಕು.

## 22. ಒಗ್ಗಟ್ಟಿನಲ್ಲಿ ಬಲವಿದೆ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಬೇಡನ ಬಲೆಯಲ್ಲಿ ಸಿಲುಕಿದ್ದ ಗುಬ್ಬಚ್ಚಿಗಳು ವಿವೇಕದಿಂದ ಯೋಚಿಸಿ ಒಗ್ಗಟ್ಟಾಗಿ ಬಲೆಯ ಸಮೇತ ಹಾರಿ ತಮ್ಮ ಪ್ರಾಣ ಉಳಿಸಿಕೊಂಡ ಕತೆ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಅದೇ ರೀತಿ ಕಾರ್ಯ ಸಾಧನೆಗೆ ಎಲ್ಲರ ಸಹಕಾರ ಅವಶ್ಯವಾದುದು. ಪರಸ್ಪರ ವಿಶ್ವಾಸದಿಂದ ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬುದನ್ನು ಮರೆಯಬಾರದು . ಯಾವುದೇ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುವಾಗ ಅಲ್ಲಿರುವ ಜನರು ಎಲ್ಲರೂ ಒಟ್ಟಾಗಿ ಹೊಂದಾಣಿಕೆಯಿಂದ ಕಾರ್ಯ ನಿರ್ವಹಿಸಿದರೆ ಆ ಕಾರ್ಯ ಯಶಸ್ವಿಯಾಗುವುದು ಎಂಬುದನ್ನು ಈ ಗಾದೆ ಮಾತು ಸೂಚಿಸುವುದು.

## 23. ನಾಳೆ ಎಂದರೆ ಹಾಳು

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ನಾಳೆ ಮಾಡುವ ಕೆಲಸ ಇಂದೇ ಮಾಡು ,ಇಂದಿನದು ಈಗಲೇ ಮಾಡು .ಯಾವುದೇ ಕೆಲಸವನ್ನೇ ಆಗಲಿ ನಾಳೆ ಮಾಡುತ್ತೇವೆಂದು ಮುಂದೂಡಬಾರದು. ನಾಳೆ ಮಾಡುತ್ತೇವೆಂದು ಯಾವುದೇ ಕೆಲಸವನ್ನು ಮುಂದೂಡಬಾರದು. ಅದು ಸೋಮಾರಿತನದ ಲಕ್ಷಣ . ಯಾವ ಕ್ಷಣದಲ್ಲಯಾದರೂ ಜೀವನ ಮುಗಿದುಹೋಗಿಬಿಡಬಹುದು. ನಾಳೆಗಳನ್ನು ನೆಚ್ಚದೆ ,ನಿನ್ನೆಗಳಲ್ಲಿ ಬದುಕದೇ ಇಂದೇ ಕೆಲಸ ಮಾಡಿ ಮುಗಿಸುವುದು ಉತ್ತಮ ಜೀವನದ ಲಕ್ಷಣ .

## 24.ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೇ ?

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಕೋಪವೆಂಬುದನರ್ಥ ಸಾಧನಂ . ಯಾವುದೇ ಕಾರಣಕ್ಕೂ ಕೋಪದ ಕೈಗೆ ಬುದ್ದಿ ಕೊಡಬಾರದು. ಕೋಪದಲ್ಲಿ ವ್ಯಕ್ತಿ ಮೊದಲು ತನ್ನನ್ನೇ ನಾಶ ಮಾಡಿಕೊಳ್ಳುತ್ತಾನೆ. ಕೋಪಕ್ಕೆ ತುತ್ತಾದ ವ್ಯಕ್ತಿ ವಿವೇಕವನ್ನು ಕಳೆದುಕೊಂಡು ತನ್ನ ಅವನತಿಗೆ ತಾನೇ ಕಾರಣವಾಗಬಹುದು. ಯಾವುದೇ ಸಂದರ್ಭದಲ್ಲಿಯಾಗಲೀ ಕೋಪ ಬಂದಾಗ ತಕ್ಷಣಕ್ಕೆ ಪ್ರತಿಕ್ರಯಿಸದೇ ವಿವೇಚನೆಯಿಂದ ಯೋಚಿಸಿ ನೋಡಬೇಕು. ತನ್ನೊಳಗಣ ಕಿಚ್ಚು ತನ್ನ ಸುಟ್ಟಲ್ಲದೇ ನೆರೆಮನೆಯ ಸುಡುವುದೇ? ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ ಎಂದಾಗಬಾರದು.

## 25.ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನುಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಮೂರ್ಖಂಗೆ ನೂರ್ಕಾಲ ಬುದ್ಧಿಯನು ಪೇಳಿದರೆ ಗೋರ್ಕಲ್ಲ ಮೇಲೆ ಮಳೆಹುಯಿದರಾಕಲ್ಲು ಹೀರ್ಕೊಂಬುದುಂಟೇ ಸರ್ವಜ್ಞ . ಯಾರಿಗೆ ಯಾವುದನ್ನು ಹೇಳಿ ಅರ್ಥ ಮಾಡಿಸಬಹುದೋ ಅದನ್ನು ಮಾತ್ರವೇ ಅವರಿಗೆ ಹೇಳಬೇಕು. ಅರ್ಥ ಮಾಡಿಕೊಳ್ಳಲಾರದವರ ಮುಂದೆ ಹೇಳುವುದು ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ .

mamatabhagwat1@gmail.com